ಇಂದು ದಿನಾಂಕಃ ***18-11-2021*** ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನಬೋದಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಎದುರುದಾರರ ಪರ ಶ್ರೀ. ಪಿ. ಎಚ್. ಪಿ. ವಕೀಲರಿಂದ:

ನನಗೆ ಕನ್ನಡ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ. ಕನ್ನಡದಲ್ಲಿ ಗಂಗನಗೌಡ ಎಂದು ಸಹಿಯನ್ನು ಮಾಡುತ್ತೇನೆ. ನಮ್ಮ ತಂದೆ ಯ ಹೆಸರು ವೀರಹನುಮಂತಗೌಡ. ನಮ್ಮ ತಂದೆಗೆ ಸುಶೀಲಮ್ಮ, ನಿಂಗಮ್ಮ ಮತ್ತು ಶಾಂತಮ್ಮ ಎಂಬ 3 ಜನ ಹೆಣ್ಣು ಮಕ್ಕಳು ಎನ್ನುವುದು ನಿಜ. ಶಿವಾನಂದಪ್ಪಗೌಡ, ಚಂದ್ರಶೇಖರಗೌಡ, ಗಂಗನಗೌಡ ಹಾಗೂ ಅಡಿವೆಪ್ಪಗೌಡ ಎನ್ನುವ 4 ಜನ ಗಂಡು ಮಕ್ಕಳು ಎನ್ನುವುದು ನಿಜ. 20 ವರ್ಷದಿಂದ ನಾವು ಅಣ್ಣ ತಮ್ಮಂದಿರು ಸಹಿ ಇರುವುದಿಲ್ಲ, ಅವರು ನಾವು ಮಾತನಾಡುವುದಿಲ್ಲ. ನಾನು, ಶಿವಾನಂದಪ್ಪಗೌಡ ಹಾಗೂ ಚಂದ್ರಶೇಖರಗೌಡ ಕಡೂರಿನಲ್ಲಿ ವಾಸ ಇರುತ್ತೇವೆ ಎನ್ನುವುದು ನಿಜ. ಮಂಜನಗೌಡ ಶಿವಾನಂದಪ್ಪಗೌಡನ ಮಗ. ಸದರಿ ಮಂಜನಗೌಡನಿಗೆ 30 ವರ್ಷ ವಯಸ್ಸು ಆಗಿರುತ್ತದೆ. ಮಂಜನಗೌಡ ನನ್ನ ಜೊತೆ ಆಗಾಗ ಮಾತನಾಡುತ್ತಾನೆ. ಮಂಜನಗೌಡ ನನ್ನ ಜೊತೆ ಮಾತನಾಡದೆ ಇರುವುದಕ್ಕೆ ಅವರು ನಮ್ಮ ಮಧ್ಯ ವೈರತ್ವ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಮಾಹಿತಿ ಗೊತ್ತಿರುವುದಿಲ್ಲ. ಇದುವರೆಗೂ ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿಲ್ಲ. ಎಷ್ಟು ದಿನ ಕಾಲವಿಳಂಬವಾಗಿದೆ ಎಂದು ಅರ್ಜಿಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಮ್ಮ ತಂದಗೆ ಸಿದ್ದಪ್ಪ ಎನ್ನುವ ತಮ್ಮ ಇದ್ದ ಎನ್ನುವುದು ಗೊತ್ತಿಲ್ಲ. ಸದರಿ ಸಿದ್ದಪ್ಪನಿಗೆ ಮದುವೆ ಆಗಿದೆ ಇಲ್ಲ ಮತ್ತು ಎಷ್ಟು ಮಕ್ಕಳು ಇರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಸಿದ್ದಪ್ಪನನ್ನು ಕೊನೆಯದಾಗಿ ನಾನು ನೋಡಿ 30 ವರ್ಷ ಆಗಿರುತ್ತದೆ. ನಮ್ಮ ತಂದೆಗೆ ಸಿದ್ದಪ್ಪ ಎನ್ನುವ ತಮ್ಮ ಇರುತ್ತಾನೆ ಎನ್ನುವುದು ನಿಜ. ಸದರಿ ಸಿದ್ದಪ್ಪ ಸುಶೀಲಮ್ಮಳನ್ನು ಮದುವೆ ಆಗಿದ್ದ ಅವಳು ಅವನ ಕಾನೂನು ಬದ್ಧ ಹೆಂಡತಿ ಎನ್ನುವುದು ಗೊತ್ತಿರುವುದಿಲ್ಲ. ಸಿದ್ದಪ್ಪ ಮತ್ತು ಸುಶೀಲಮ್ಮ ಇವರ ವೈವಾಹಿಕ ಜೀವನದಲ್ಲಿ

ಅನುಸೂಯಮ್ಮ ಎನ್ನುವ ಮಗಳು ಜನಿಸಿರುತ್ತಾಳೆ ಎನ್ನುವುದು ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುವುದು ನಿಜ. ಪಿತ್ರಾರ್ಜಿತ ಆಸ್ತಿಗಳಲ್ಲಿ ನಮ್ಮ ತಂದೆಗೆ ಅರ್ಧ ಹಿಸ್ಸೆ ಹಾಗೂ ನಮ್ಮ ಸಿದ್ದಪ್ಪನಿಗೆ ಅರ್ಧ ಹಿಸ್ಸೆ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ದಿಃ 29-10-2004 ರಂದು ಸಿದ್ದಪ್ಪ ಕಡೂರ ಗ್ರಾಮದಲ್ಲಿ ಮೃತ ಪಟ್ಟಿರುತ್ತಾನೆ ಎನ್ನುವುದು ನಿಜ. ಸದರಿ ಸಿದ್ದಪ್ಪನ ಜೀವಿತಾವಧಿಯಲ್ಲಿ ಅವನಿಗೆ ಏನೇನು ಕಾಯಿಲೆ ಇದ್ದವು ಎನ್ನುವುದು ಗೊತ್ತಿರುವುದಿಲ್ಲ. ಅವನು ಕಾಯಿಲೆಗೆ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಂದೆ ನಮ್ಮ ಘರಾಣೆದ ಆಸ್ತಿಯಲ್ಲಿ ಸಿದ್ದಪ್ಪನಿಗೆ ಹಿಸ್ಸೆ ಕೊಟ್ಟಿಲ್ಲ ಎನ್ನುವುದು ನಿಜ. ಸಿದ್ದಪ್ಪ ಮೃತ ಪಟ್ಟ ನಂತರ ನಮ್ಮ ತಂದೆಗೆ ಹಾಗೂ ನಮಗೆ ಸಿದ್ದಪ್ಪನ ಹೆಂಡತಿ ಮತ್ತು ಮಗಳು ಹಿಸ್ಸೆ ಕೊಡಬೇಕು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಅಸಲು ದಾವಾ ನಂಃ 100/2016 ನ್ನು ಹಿರೇಕೆರೂರು ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎನ್ನುವುದು ಗೊತ್ತಿರುವುದಿಲ್ಲ. ಸದರಿ ಅಸಲು ದಾವೆಯಲ್ಲಿ ದಿಃ 25-06-2016 ರಂದು ನ್ಯಾಯಾಲಯದಿಂದ ಪ್ರೋಸಸ್ ಸರ್ವರ್ ಸಮನ್ಸನ್ನು ಜಾರಿ ಮಾಡಲು ಬಂದಾಗ ನಾನು ಜಮೀನಿನ ಕೆಲಸಕ್ಕೆ ಹೋಗಿರುತ್ತೇನೆ ಎಂದು ನಮ್ಮ ಅಣ್ಣನ ಮಗ ಮಂಜನಗೌಡ ನನ್ನ ಪರವಾಗಿ ಸಹಿ ಮಾಡಿ ಸಮನ್ಸು ಮತ್ತು ವಾದ ಪತ್ರದ ನಕಲನ್ನು ತೆಗೆದುಕೊಂಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಸಮನ್ಸು ಜಾರಿ ಆದ ನಂತರ ನಮ್ಮ ಅಣ್ಣ ಶಿವಾನಂದಪ್ಪಗೌಡ ನ್ಯಾಯಾಲಯಕ್ಕೆ ಹಾಜರಾಗಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ದಾವೆಯ ಮುದ್ದತ್ತಿನ ದಿನದಂದು ನಾವು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ನನ್ನ ಸ್ಥಾನದಲ್ಲಿ ಏಕತರಫೀ ಮಾಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ದಿಃ 25-06-2016 ರಂದು ಸಿದ್ದಪ್ಪನ ಮಗಳು ದಾವೆ ಮಾಡಿರುವ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಚಂದ್ರಶೇಖರಗೌಡ ಹಾಗೂ ಶಿವಾನಂದಪ್ಪಗೌಡ ಹಾಜರಾಗಿದ್ದರು ಸಹ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಎನ್ನುವುದು ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಉದ್ದೇಶ ಪೂರ್ವಕವಾಗಿ ಹಾಜರ ಆಗದ ಕಾರಣ ಚಂದ್ರಶೇಖರಗೌಡ ಹಾಗೂ ಶಿವಾನಂದಪ್ಪಗೌಡ ಲಿಖಿತ ಹೇಳಿಕೆಯನ್ನು ಸಲ್ಲಿಸದ ಕಾರಣ

ವಾದಿಯರ ಪರ ವಿಚಾರಣೆಯಾಗಿ ದಿಃ 04-08-2017 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 04-08-2017 ರಂದು ಡಿಕ್ರಿ ಆಗಿರುವ ಸಂಪೂರ್ಣ ಮಾಹಿತಿ ನನಗೆ , ಚಂದ್ರಶೇಖರಗೌಡ ಹಾಗೂ ಶಿವಾನಂದಪ್ಪಗೌಡ ಇವರಿಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವೆ ನಂಃ 100/2016 ರ ದಿಃ 04-08-2017 ರಂದು ಡಿಕ್ರಿ ಆದ ನಂತರ ವಾದಿಗಳು ದಿಃ 16-12-2017 ರಂದು ಎಫ್.ಡಿ.ಪಿ. ನಂಃ 21/2017 ನ್ನು ಸಲ್ಲಿಸಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಸಾಕ್ಷಿಗೆ 1 ಮತ್ತು 2 ನೇ ಎದುರುದಾರರ ಪರ ವಕೀಲರು ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ನಿನ್ನ ಸಹಿ ಇರುತ್ತದೆ ಎಂದು ಹೇಳಿದ್ದು, ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಅಲ್ಲ ಎಂದು ಹೇಳಿರುತ್ತಾರೆ. 1 ಮತ್ತು 2 ನೇ ಎದುರುದಾರರ ಪರ ವಕೀಲರು ಸದರಿ ದಾಖಲೆ ಎಫ್.ಡಿ.ಪಿ. ನಂಃ 21/2017 ರಲ್ಲಿನ ನೋಟಿಸು ಎಂದು ಹೇಳುತ್ತಾರೆ. ಸಾಕ್ಷಿಗೆ 1 ಮತ್ತು 2 ನೇ ಎದುರುದಾರರ ಪರ ವಕೀಲರು ಪಿ ಡಬ್ಲ್ಯೂ-1 ರವರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಸಹಿ ಹಾಗೂ ಎಫ್.ಡಿ.ಪಿ. ನಂಃ 21/2017 ರಲ್ಲಿನ ನೋಟಿಸನಲ್ಲಿರುವ ಸಹಿಯನ್ನು ತೋರಿಸಿ ಎರಡರಲ್ಲೂ ಯಾವುದೇ ವ್ಯತ್ಯಾಸ ಇಲ್ಲ ಎಂದು ಹೇಳಿದ್ದು ಸಾಕ್ಷಿ ಸುಳ್ಳು ಎಂದು ಹೇಳಿರುತ್ತಾರೆ. ಸಾಕ್ಷಿಗೆ 1 ಮತ್ತು 2 ನೇ ಎದುರುದಾರರ ಪರ ವಕೀಲರು ಮೇಲ್ಮನವಿಯಲ್ಲಿನ ವಕಾಲತ್.ನಲ್ಲಿ ಸಹಿಯನ್ನು ತೋರಿಸಲಾಗಿ ಸಾಕ್ಷಿ ನನ್ನ ಸಹಿ ಎಂದು ಹೇಳಿರುತ್ತಾರೆ. ಸದರಿ ವಕಾಲತ್ತಿನಲ್ಲಿ ಇರುವ ಸಹಿ ಹಾಗೂ ಎಫ್.ಡಿ.ಪಿ. ನಂಃ 21/2017 ರಲ್ಲಿನ ನೋಟಿಸನಲ್ಲಿರುವ ಸಹಿ ಎರಡು ಒಂದೆ ಇರುತ್ತವೆ ಎಂದರೆ ಸರಿಯಲ್ಲ. ಎಫ್.ಡಿ.ಪಿ. ನಂಃ 21/2017 ರಲ್ಲಿ ದಿಃ 20-02-2018 ರಂದು ನಾನು ನೋಟಿಸನ್ನು ಖುದ್ದಾಗಿ ಪಡೆದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 20-02-2018 ರಂದು ಎಫ್.ಡಿ.ಪಿ. ನಂಃ 21/2017 ರಲ್ಲಿನ ನೋಟಿಸು ಖುದ್ದಾಗಿ ನಾನು ಪಡೆದಾಗ ಮೂಲ ದಾವೆ ನಂಃ 100/2016 ರಲ್ಲಿ ಡಿಕ್ರಿ ಆಗಿರುವ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಎಫ್.ಡಿ.ಪಿ. ನಂಃ 21/2017 ರಲ್ಲಿ ನನಗೆ ನೋಟಿಸು ಖುದ್ದಾಗಿ ಜಾರಿ ಆಗಿದ್ದರು ಸಹ ನಾನು ಹಾಜರಾಗಿಲ್ಲ ಎಂದರೆ ಸರಿಯಲ್ಲ. ಎಫ್.ಡಿ.ಪಿ. ನಂಃ 21/2017 ರಲ್ಲಿ

ದಿಃ 27-02-2020 ರಂದು ನ್ಯಾಯಾಲಯದ ಆಯುಕ್ತರು ಅಳತೆಗೆ ಬರುತ್ತೇವೆ ಎಂದು ನನಗೆ ಖುದ್ದಾಗಿ ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ 1 ಮತ್ತು 2 ನೇ ಎದುರುದಾರರ ಪರ ವಕೀಲರು ಎಫ್.ಡಿ.ಪಿ. ನಂಃ 21/2017 ರಲ್ಲಿನ ನ್ಯಾಯಾಲಯದ ಆಯುಕ್ತರಿಗೆ ತಕರಾರು ಅರ್ಜಿಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಹೌದು ಎಂದು ಹೇಳಿರುವುದರಿಂದ ಸದರಿ ತಕರಾರಿನ ದೃಢೀಕೃತ ನಕಲನ್ನು ನಿಆರ್-1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಆಯುಕ್ತರಿಗೆ ನಮ್ಮದು ತಕರಾರು ಇರುತ್ತದೆ ಎಂದು ನಾನು ಮತ್ತು ಇತರರು ನಿ. ಆರ್ -1 ರಂತೆ ತಕರಾರು ಅರ್ಜಿಯನ್ನು ಕೊಟ್ಟಿರುತ್ತೇವೆ ಎನ್ನುವುದು ನಿಜ. ದಿಃ 27-02-2020 ರಂದು ನಾವು ನ್ಯಾಯಾಲಯದ ಆಯುಕ್ತರಿಗೆ ತಕರಾರನ್ನು ಸಲ್ಲಿಸಿದಾಗ ನಮಗೆ ವಿಷಯ ಗೊತ್ತಿದ್ದರು ಸಹ ಗೊತ್ತಿಲ್ಲವೆಂದು ಮೇಲ್ಮನವಿಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಚಂದ್ರಶೇಖರಪ್ಪ ಇದೆ ನ್ಯಾಯಾಲಯದಲ್ಲಿ ಆರ್. ಎ. ನಂಃ 13/2020 ನ್ನು ಸಲ್ಲಿಸಿದ್ದ ಎನ್ನುವುದು ಗೊತ್ತಿರುವುದಿಲ್ಲ. ಸದರಿ ಆರ್. ಎ. ನಂಃ 13/2020 ರಲ್ಲಿ ನಮಗೆ ನೋಟಿಸು ಬಂದಿಲ್ಲ. ಸದರಿ ಮೇಲ್ಮನವಿಯಲ್ಲಿ ದಿಃ 06-10-2020 ರಂದು ನನಗೆ ನೋಟಿಸು ಜಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನೋಟಿಸು ನನಗೆ ಜಾರಿ ಆದ ವಿಷಯವನ್ನು ಈ ಮೇಲ್ಮನವಿಯಲ್ಲಿ, ಮಧ್ಯಂತರ ಅರ್ಜಿಯಲ್ಲಿ, ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಈ ಮೇಲ್ಮನವಿಯನ್ನು 3 ವರ್ಷ 3 ತಿಂಗಳು 28 ದಿನಗಳ ಕಾಲ ವಿಳಂಬ ಸಲ್ಲಿಸಿರುತ್ತೇವೆ ಎನ್ನುವುದು ಗೊತ್ತಿರುವುದಿಲ್ಲ. 3 ವರ್ಷ 3 ತಿಂಗಳು 28 ದಿನಗಳ ಕಾಲ ವಿಳಂಬ ಆದ ವಿಷಯ ಗೊತ್ತಿದ್ದರು ಸಹ ನ್ಯಾಯಾಲಯದ ಆಯುಕ್ತರು ಬಂದಾಗ ವಿಷಯ ನಮಗೆ ಗೊತ್ತಾಗಿರುತ್ತದೆ ಎಂದು ಮೇಲ್ಮನವಿಯಲ್ಲಿ ಸುಳ್ಳು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ನಂಃ 2 ರಲ್ಲಿ ಎಷ್ಟು ಕಾಲ ವಿಳಂಬ ಆಗಿದೆ ಎಂದು ಹೇಳಿಲ್ಲ, ಸ್ಪಷ್ಟವಾದ ಕಾರಣಗಳನ್ನು ಹೇಳಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೂಲ ದಾವೆ ನಂಃ 100/2016 ಕಾಯಿದೆ ಬದ್ಧವಾಗಿ ಡಿಕ್ರಿ ಆಗಿರುತ್ತದೆ ಎನ್ನುವುದು

ಆರ್. ಎ. ನಂಃ 35/2020
ಪಿ.ಡಬ್ಲ್ಯೂಃ 1

ಗೊತ್ತಿರುವುದಿಲ್ಲ. ಸಿದ್ದಪ್ಪನ ಹೆಂಡತಿ ಸುಶೀಲಮ್ಮ ಇವಳಿಗೆ 80 ವರ್ಷ ವಯಸ್ಸು ಎನ್ನುವುದು ಗೊತ್ತಿರುವುದಿಲ್ಲ. ಮೂಲ ದಾವೆ ನಂಃ 100/2016 ರಲ್ಲಿ ಡಿಕ್ರಿ ಆದ ವಿಷಯ ಆಗಲೇ ಗೊತ್ತಿದ್ದು 1 ಮತ್ತು 2 ನೇ ಎದುರುದಾರಿರಿಗೆ ತೊಂದರೆ ಕೊಡುವ ಸಲುವಾಗಿ ಕಾಲ ವಿಳಂಬವಾಗಿ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಎಫ್.ಡಿ. ಪಿ. ಮತ್ತು ಮೂಲ ದಾವೆಯ ಸಮನ್ಸು ಕಾಯಿದೆ ಬದ್ದ ವಾಗಿ ಜಾರಿ ಆಗಿ ದ್ದರು ಸಹ ಆ ಯಾವುದೇ ವಿಷಯವನ್ನು ಮೇಲ್ಮನವಿಯಲ್ಲಿ ಹಾಗ ಮಧ್ಯಂತರ ಅರ್ಜಿ ನಂಃ 2 ರಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ನಾವು ಮತ್ತು ನಮ್ಮ ಸಹೋದರರು ಸೇರಿ ತೊಂದರೆ ಕೊಡುವ ಸಲುವಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 3 ರಿಂದ 8 ನೇ ಎದುರುದಾರರ ಪರ ಎಸ್. ಆರ್. ಎಲ್ ವಕೀಲರಿಂದ ಏನು ಇಲ್ಲವೆಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 18-11-2021

ಸಹಿ/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು